Regd No M 1299 Sri ತಾ|| 19—10—51

SATYAVADI = 35th Year

ಸಂಸ್ಥಾಪಕರು- ಅರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ದಂಡ ಕಡಿಮೆಯಾಯಿತು

ಅಕ್ರಮ ರೀತಿಯಲ್ಲಿ ಬಂಗಾರವಿಟ್ಟುಕೊಂಡಿದ್ದಕ್ಕೆ ಬೊಂಬಾಯಿನ ಮೆಸರ್ಸ್ ಪ್ರೇಮಚಂದ ರಾಯಚಂದ ಎಂಬ ಪ್ರಸಿದ್ಧ ವ್ಯಾಪಾರಿ ಕಂಪೆನಿಗೆ ಬೊಂಬಾಯಿಯ ಅಬಕಾರಿ ಕಲೆಕ್ಟರರು ವಿಧಿಸಿದ್ದ ಶಿಕ್ಷೆಯನ್ನು ಕೇಂದ್ರ ಕಂದಾಯ ಮಂಡಳವು ಸ್ಥಿರಪಡಿಸಿತು. ಆದರೆ ದಂಡದ ಹಣವನ್ನು ಮಾತ್ರ ರೂ 40 ಲಕ್ಷದಿಂದ ರೂ 30 ಲಕ್ಷಕ್ಕೆ ಕಡಿಮೆ ಮಾಡಲಾಯಿತು. ರೂ. 14 ಲಕ್ಷ ರೂ. ಚಿನ್ನವನ್ನು ಕಾನೂನು ವಿರೋಧವಾಗಿ ಆಮದು ಮಾಡಿದ್ದಕ್ಕಾಗಿ ಈ ಕಂಪೆನಿ ಮೇಲೆ ಖಟ್ಲೆ ಹಾಕಲಾಗಿತ್ತು.

ಪಾರ್ಲಿಮೆಂಟಿನಲ್ಲಿ ಶ್ರೀ ಕೆ. ಹನುಮಂತಯ್ಯ

ಆಹಾರ ಧಾನ್ಯಗಳು ಮತ್ತು ಹಣದ ಬೆಲೆ ಇವುಗಳಲ್ಲಿ ಸಮತೂಕವಿರಬೇಕು ಹಾಗೆ ಮಾಡದಿದ್ದರೆ ರೈತರು ಅಧಿಕವಾಗಿ ಹಣದ ಬೆಳೆಯನ್ನು ಬೆಳೆಯುವರು ಎಂಬುದಾಗಿ ಮೈಸೂರಿನ ಶ್ರೀ ಕೆ ಹನುಮಂತಯ್ಯನವರು ಮೊನ್ನೆ ಮೊನ್ನೆ ಭಾರತ ಪಾರ್ಲಿಮೆಂಟಿನಲ್ಲಿ ಪಂಚವಾರ್ಷಿಕ ಯೋಜನೆ ಬಗ್ಗೆ ಮಾತನಾಡಿ ತ್ತಾ ತಿಳಿಸಿದರು.

ಈಜಿಪ್ಟಿನ ಬಗೆಗೆ ಚೀನಾ ಪತ್ರಿಕೆ ಹೇಳಿಕೆ

ಈಜಿಪ್ಟಿನ ಜನರ ಕಷ್ಟಸರಂದರೆಗಳ ಅರಿವು ಚೀನಾದ ಜನತೆಗೆ ಸಂಪೂರ್ಣ ಇದೆಯೆಂದೂ ಈಜಿಪ್ಟಿನ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಮ್ಮ ಸಂಪೂರ್ಣ ಸಹಾನುಭೂತಿಯಿದೆಯೆಂದೂ ಪೀಕಿಂಗಿನ ಪೀಪಲ್ಸ್ ಡೈಲಿ ಪತ್ರಿಕೆ ಬರೆದಿದೆಯೆಂದು ಪೀಕಿಂಗ್ ರೇಡಿಯೋ ಸಾರಿದೆ

ಧಾರವಾಡಾದಲ್ಲಿ ಆಶ್ಚರ್ಯ ಪ್ರಸಂಗ

ಧಾರವಾಡಾದ ಸಿದ್ಧನಗೌಡ ಪಾಟೀಲ ಇವರ ಗೃಹದಲ್ಲಿ ಒಂಬತ್ತು ದಿವಸ ಅದಿಶಕ್ತಿದೇವಿಯ ಪಾರಾಯಣ ನಡೆದ ಕಾಲಕ್ಕೆ ಕುಮಾರಿ ಶಾರದಾಬಾಯಿ ಹೊರಡಿ ಮತ್ತು ಮಹಾಬಲೇಶ್ವರ ಶಾಂಬ್ರಾಣಿ ಇವರು ದೇವಿಯ ಸೇವೆಯನ್ನು ಭಕ್ತಿಯಿಂದ ಮಾಡಿದ್ದರಿಂದ 9 ನೇ ದಿನದ ಕುಮಾರಿ ಗಿರೀಶ ಹೊರಡಿಯವರಿಗೆ ದೇವಿಯು ಪ್ರಸನ್ನಳಾಗಿ ಐದು ವಾರ ಲಕ್ಷ್ಮೀದೇವಿ ಪೂಜೆಯನ್ನು ಮಾಡಲು ಅಪ್ಪಣೆಯಾಯಿತು. ಅದರಂತೆ ಪೂಜೆ ಮಾಡಿ ದೇವಿಚಿತ್ರದ ಎದುರಿಗೆ 16 ಬಾಳೆಹಂಣುಗಳ ಹೆಣಿಗೆ ಮೇಲೆ ಒಂದು ಸೇವಂತಿಗೆ ಇಡಲು ಅದು ಕಮಲಾಕಾರ ತಾಳಿತು. ಇದನ್ನು ನೋಡಲು ತುಂಬಾ ಜನಬರುತ್ತಿದ್ದಾರೆ

ಚರ್ಚಿಲ್ಲರ ಕುದುರೆ ಓಡಲಾರದು

ಚರ್ಚಿಲ್‌ರವರ ಜೂಜಿನ ಕುದುರೆ ಕಲೋನಿಸ್ಟ್ ಗಾಯಗೊಂಡಿರುವದರಿಂದ ಇನ್ನು ಮುಂದೆ ಅದು ಜೂಜಿನಲ್ಲಿ ಓಡಲಾರದೆಂದು ಹೇಳಲಾಗಿದೆ. ಇದು 24 ಜೂಜುಗಳಲ್ಲಿ ಓಡಿ 13 ರಲ್ಲಿ ಗೆದ್ದಿದೆ. ಬಹುಮಾನದ ಧನ ರೂ 1 ಲಕ್ಷ 60 ಸಾವಿರ ತಂದಿದೆ.

ಜಪಾನಿಗಾದ ನಷ್ಟ

ಜಪಾನಿನಲ್ಲಿ ಬೈಪೂರ್ ಹಾವಳಿಯಿಂದ ಒಂದು ಕೋಟಿ ಯೆ.ನ್ ನಷ್ಟವಾಗಿದೆಯೆಂದು ಟೋಕಿಯೋ ವಾರ್ತೆ.

ಭಾರತದ ವಿಭಜನೆ ಯಾವತ್ತೂ ಶಾಶ್ವತವಾದುದು

ಪಾಕೀಸ್ತಾನದ ಆಂತರಿಕ ಪರಿಸ್ಥಿತಿಯಲ್ಲಿ ಪ್ರವೇಶಿಸುವದು ನಮಗಿಲ್ಲ. ಅಲ್ಲಿನ ಅಲ್ಪಸಂಖ್ಯಾತರ ಹಣೇ ಬರಹ ಕುರಿತು ನಾವು ಅಸಕ್ತರಾಗುವದು ಸಹಜ ರಾಷ್ಟ್ರವಿಭಜನೆ ವಿರುದ್ಧ ಯಾವೊಬ್ಬನೂ ಭಾರತದಲ್ಲಿ ಮಾತನಾಡುವದು ಸಂಪೂರ್ಣ ಅವಿವೇಕ, ಅಸತ್ಯ ಎಂದು ಕಾಂಗ್ರೆಸಿನ ಅಧ್ಯಕ್ಷ ಭಾಷಣದಲ್ಲಿ ಪಂ|| ನೆಹರು ತಿಳಿಸಿರುವದಾಗಿ ದೆಹಲಿ ವಾರ್ತೆ.

ನವೀನ ಗಾದೆ

ಶಾಸನ ಸಭೆಯಲ್ಲಿನ ಸೀಟಿಗಿಂತ ರುಚಿಯಿಲ್ಲ ; ನೋಟಿಗಿಂತ ಬಂಧುವಿಲ್ಲ !

ದಿವ್ಯವಾಣಿ

ಅಸಹಿಷ್ಣುತೆಯು ಹಿಂಸೆಯು ಒಂದು ರೂಪ ಅಂತೆಯೇ ಅದು ನಿಜವಾದ ಪ್ರಜಾಪ್ರಭುತ್ವ ಭಾವನೆಯು ಮಾರ್ಗದಲ್ಲಿಯು ಒಂದು ಆತಂಕ

— ಮಹಾತ್ಮ ಗಾಂಧಿ

ನಿಯಂತ್ರಣ ರದ್ದು

ಸೀಮೆಎಣ್ಣೆ ಮೇಲಿನ ಎಲ್ಲ ನಿಯಂತ್ರಣವನ್ನೂ ಮೈಸೂರು ಸರ್ಕಾರ ರದ್ದು ಗೊಳಿಸಿದೆ

ಬ್ರಿಟ್ ಹೇಳಿಕೆ

ಬ್ರಿಟೀಷ್ ಪಡೆಗಳು ಸೂಯಜ್ ಕಾಲುವೆ ಪ್ರದೇಶಗಳಲ್ಲಿ ಸುಸಜ್ಜಿತವಾಗಿವೆ. ಈಜಿಪ್ಟು ಸೂಯಜ್ ಕಾಲುವೆ ಪ್ರದೇಶದಲ್ಲಿ ಶಾಂತಿ ಸಂರಕ್ಷಣೆ ಮಾಡಲು ವಿಫಲವಾದ ದರಿಂದ ಬ್ರಿಟೀಷ್ ಸೇನೆಯೇ ರಕ್ಷಣೆ ಮಾಡುವದೆಂದು ಬ್ರಿಟ್ ತಿಳಿಸಿದೆ.

ಎಣ್ಣೆ ಉತ್ಪನ್ನವಾಗುವುದು

ಅಬಡಾನಿನಲ್ಲಿ ಪುನಃ ಒಂದೆರಡು ತಿಂಗಳಿನಲ್ಲಿ ಎಣ್ಣೆಯನ್ನು ತೆಗೆಯಲಾಗುವದೆಂದು ಪರ್ಷಿಯ ಪ್ರಧಾನಿ ಮುಸಾದಿಕರವರ ಸಹಾಯಾಧಿಕಾರಿ ಡಾ|| ಫಾತೆಮಿ ಫ್ಲಷಿಂಗ್‌ವೆ ಡೋನಲ್ಲಿ ನಿನ್ನೆ ತಿಳಿಸಿರುವರು.

ನೆಹರು ಹಿತವಾದ

ಅಖಿಲ ಭಾರತ ಕಾಂಗ್ರೆಸ್‌ನ 57 ನೆ ಅಧಿವೇಶನದ ಅಧ್ಯಕ್ಷ ಭಾಷಣವನ್ನು ಮಾಡುತ್ತಾ, ನಿನ್ನೆ ಪಂ|| ನೆಹರುರವರು ಭಾರತ ಮಹಾ ರಾಷ್ಟ್ರ, ಸಂಸ್ಕೃತಿ ಪರಂಪರೆಗಳನ್ನು ಮುಕ್ತಕಂಠದಿಂದ ಹೊಗಳಿದ್ದು, ನಾವು ಪ್ರಾಂತೀಯತೆಯ ಸಂಕುಚಿತ ಪ್ರದೇಶದಲ್ಲಿರಬೇಕಾದುದಿಲ್ಲ ಎಂದರು.

ಪ್ರಜಾಸಂಘ ಸ್ವತಂತ್ರವಾಗಿ ಸ್ಪರ್ಧಿಸುವದು

ವೈಸೂರು ಪ್ರಜಾಸಂಘ ನಿನ್ನೆ ಸಭೆ ಸೇರಿ ಮಹಾಚುನಾವಣೆಯಲ್ಲಿ ಇತರ ರಾಜಕೀಯ ಪಕ್ಷಗಳೊಡನೆ ಸೇರಕೂಡದೆಂದು 24—3 ಮತಗಳಿಂದ ನಿರ್ಧರಿಸಿದೆ. ಸಂಸ್ಥಾನ ಶಾಸನಸಭೆ, ಪಾರ್ಲಿಮೆಂಟ್ ಅಯ್ಕೆಗೆ ಪ್ರಜಾಸಂಘದ ಆಶ್ರಯದಲ್ಲಿ ಸ್ಪರ್ಧಿಸಲು ಇದೇ 25 ನೆ ತಾ|| ಒಳಗೆ ಅರ್ಜಿ ಹಾಕಿಕೊಳ್ಳಬೇಕು.

——

ವಾರ್ತೆಗಳು

ಆಚಾರ್ಯ ಕೃಪಾಲಿನಿ ಬೆಂಗಳೂರಿಗೆ ಇದೇ ತಾ|| 21 ರಲ್ಲಿ ಬಂದು ವೈಸೂರು ಸಂಸ್ಥಾನದಲ್ಲಿ ನಾಲ್ಕು ದಿವಸಗಳು ಪ್ರವಾಸ ಮಾಡುವರು.

ಚಿಕ್ಕನಾಯ್ತಸಹಳ್ಳಿಗೆ ಕಳಿಸಲಾದ ಮೂರು ಮೂಟೆ ಗೋಧಿ ಹುಳಿತುಹೋದವಂತೆ !

ಬೆಂಗಳೂರು ಕಲಾಸಿಪಾಳ್ಯದ ಶ್ರೀ ಕೆ ರಾಮಯ್ಯಯೆಂಬವರಿಗೆ ಹಾಲಿಗೆ ನೀರು ಬೆರಸಿದ ತಪ್ಪಿಗಾಗಿ ರೂ. 50 ದಂಡ ವಿಧಿಸಲ್ಪಟ್ಟಿತು.

×

× ಸೂಯಜ ಕಾಲುವೆ ಮೇಲಿನ ಎಲ್‌ಫರ್ದಾನ ಸೇತುವೆಯನ್ನು ಈಜಿಪ್ಟ ಸೆಂಟ್ರಿಗಳ ಸಂಗಡ ಆಯುಧಗಳೊಡನೆ ಹೋರಾಡಿ ನಿನ್ನೆ ರಾತ್ರಿ ಬ್ರಿಟ್ ಸೇನೆ ವಶಮಾಡಿಕೊಂಡಿತೆಂದು ಇಸ್ರಾಯಿಯಾ ವಾರ್ತೆ

× ಪ್ರಜಾಪಕ್ಷದ ಆಚಾರ್ಯ ಕೃಪಾಲಿನಿ ನಿನ್ನೆ ಕಾಂಗ್ರೆಸ ಅಧಿವೇಶನದಲ್ಲಿ ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿದ್ದರೆಂದು ದೆಹಲಿ ವಾರ್ತೆ

× ದೆಹಲಿಯಲ್ಲಿ ನಿನ್ನೆ ಸೇರಿದ್ದ ಕಾಂಗ್ರೆಸಿನ ಒಹಿಂಡಿಯ ಅಧಿವೇಶನ ಭಾರತದ ವಿದೇಶ ನೀತಿಯನ್ನು ಒಪ್ಪಿತು

ಸುಖಜೀವನವಾದ, ನೀತಿಪತನ

ದಾಸ್ಯದ ಫಲವಾಗಿ ನಮ್ಮಲ್ಲಿ ಪಾತಿತ್ಯವು ಸರ್ವತೋಮುಖವಾಗಿ ಉಂಟಾಗಿದೆ. ರಾಜಕೀಯ ಮತ್ತ ಅಧಿಕಾರ ಪತನಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಪತನ ಉಂಟಾಗಿದೆ ಕನ್ನಡದ ಮೂಲಕವೇ ಪ್ರೌಢಶಾಲೆಗಳಲ್ಲಿ ಪಾಠಪ್ರವಚನ ಗಳೆಲ್ಲ ನಡೆಯಬೇಕೆಂಬ ತತ್ವವನ್ನು ಮೈಸೂರು ಸರಕಾರದವರು ಅನುಸರಿಸಿಯೂ ಆಚರಣೆಗೆ ಆ ತತ್ವವನ್ನ ತರುವಾಗ ' ಬೇಕೋ ಬೇಡವೋ ' ನೀತಿಯನ್ನು ಅನು ಸರಿಸಿದರು. ' ಬಲವಂತ ಮಾಫಸಾನ ' ! ನಂಬಿಕೆ ಇಲ್ಲದವರ ನಡತೆ ಹೇ ಗಿದ್ದೀತು ? ಹತ್ತು ಹದಿನೈದು ವರ್ಷಗಳಾದರೂ ತಾಲೆಗಳ ಶಿಕ್ಷಣ ಕನ್ನಡ ವಾಗಲಿಲ್ಲ. ಶಾಸ್ತ್ರಕ್ಕೆ ಮಾತ್ರ ಕನ್ನಡ ! ಇನ್ನು ಮಕ್ಕಳ ತಂದೆ ತಾಯಿ ಗಳು, ಪೋಷಕರೋ, ದೇವರೇ ಗತಿ. ಅವರು ನಮ್ಮ ಮಕ್ಕಳಿಗೆ, ಕನ್ನಡ ಮಾಡಿ ಯಂ ಬೇಡ, ಇಂಗ್ಲೀಷ್ ಮಾಡಿಯಂ ಬೇಕು, ಅನ್ನುತ್ತಾರೆ. ಅದೇಕೆ, ಎಂದು ಕೇಳಿದರೆ, ಬುದ್ಧಿವಂತರು ನೇರವಾಗಿ ಉತ್ತರ ಕೊಡುವುದಿಲ್ಲ. ಅನೇಕರು, ಕಾ ಲೇಜಿಗೆ ಹೋದಾಗ ಇಂಗ್ಲೀಷ್ ಮಾಡಿಯಂ ಇರುತ್ತದೆ. ಆದಕಾರಣ ಇಲ್ಲೂ ಇಂಗ್ಲೀಷ್ ಮಾಡಿಯಂ ತೆಗೆದುಕೊಂಡರೆ ವಿದ್ಯಾರ್ಥಿಗೆ ಮುಂದೆ ಸುಲಭವಾಗು ತ್ತದೆ, ಇಲ್ಲವಾದರೆ ಕಷ್ಟ, ಎಂಬದಾಗಿ ಉತ್ತರ ಕೊಡುತ್ತಾರೆ. ಇನ್ನು ಕೆಲವರು, ಕನ್ನಡದ ಮೂಲಕ ಕಲಿತರೆ ಸ್ಟ್ಯಾಂಡರ್ಡ್ ಬಹಳ ಕಡಮೆಯಾಗಿಬಿಡುತ್ತದೆ, ಅ ನ್ನುತ್ತಾರೆ ! ಬಹಳ ಮಂದಿ, ಕನ್ನಡ ಮಾಡಿಯಂ ತೆಗೆದ ಕೊಂಡರೆ ಮಾನಕ್ಕೆ ಕಡಮೆ, ಇಂಗ್ಲೀಷ್ ಮಾಡಿಯಂ ತೆಗೆದುಕೊಂಡರೆ ಮರ್ಯಾದೆ ಹೆಚ್ಚು ಎಂದು ನಂಬಿದ್ದಾರೆ ಒಬ್ಬ ದೊಡ್ಡ ಮನುಷ್ಯರೊಂದಿಗೆ ಈ ವಿಚಾರ ಕುರಿತು ಮಾತ ನಾಡುತ್ತಿದ್ದಾಗ, ವಿನೋದಪ್ರಿಯರಾದ ಅವರ ಯಜಮಾನಿಯವರು, ಇಂಗ್ಲೀಷ್ ಮಾಡಿಯಂ ಖಾಸಾ ಹುರ ! ಕನ್ನಡ ಮಾಡಿಯಂ ಖರ್ಜ ಹಾರ ! ಅಂದರು.

(ಸಶೇಷ)



Protect the Cow

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3



ಶ್ರೇಷ್ಠತೆಯ
ಹೆಗ್ಗುರುತು

ಗ್ರೈಪ್ ಸಿರಪ್

— ಜನಪ್ರಿಯ 2 ನೇ ವಾರ —

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಥದವರ ಸುಂದರ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಬಿ. ಆರ್. ಸ್ಯಾಂಡೋ, ಕಲಾವಿಶಾರದ ಕೊಟ್ಟೂರಪ್ಪ
ಎಶ್ವೇಶ್ವರಯ್ಯ, ಎಂ. ಎಸ್. ಸುಬ್ಬಯ್ಯ, ಸುರೇಂದ್ರನಾಥ್ ಪಂಡಿತ್

ಪ್ರತಿ ದಿನ 3 ಆಟಗಳು

— SUKH SAMPATH CHITRAPAT Release
Asoka Road, Mysore

ಅಪೇರ— ಕೀರ್ತಿಯುತ 4 ನೇ ವಾರ

ಸರ್ವಾಧಿಕಾರಿ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ, ನಂಬಿಯಾರ್

ಮಹೋನ್ನತ ತಮಿಳು ಚಿತ್ರ ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 19-10-51 ರಿಂದ ಸಿಂಗಾರ್ (ಹಿಂದಿ)

ರಣಜಿತ್ ಅಮೋಘ 4 ನೇ ವಾರ

ಶಬಿನಾ

ಪಾತ್ರ : ಶಾಂತಿನಸೀಂ, ಸಪ್ರೂ, ಕಕ್ಕೂ

ಮನಮೋಹನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 19-10-51 ರಿಂದ ಆಧಿರಾತ್ (ಹಿಂದಿ)

ಉಡ್‌ಲಾಂಡ್ಸ್

ಜಯಪ್ರದ 3 ನೇ ವಾರ

ಶ್ರೀ ಗಣೇಶ ಜನ್ಮ

ರೂಪ ರಾಯ್, ತ್ರಿಲೋಕ್ ಕಪೂರ್

ಪ್ರತಿ ಸಂಸಾರವೂ ನೋಡಲೇಬೇಕಾದ
ಅಮೋಘ ಪೌರಾಣಿಕ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

Edited, Printed and Published by Dharma Prachara Nirata M. S. Krishna Rao, at the Satyavadi Press Chamrajpuram Mysore